<u>ದಿನಾಂಕಃ 06-04-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು</u>

**<u>ಪಾಟೀ ಸವಾಲುಃ ಎದುರುದಾರರ ಪರ ವಕೀಲರಿಂದಃ-</u>**

ಸರ್ವೆ ನಂಬರ 93/2 ಅಡಿಕೆ ತೋಟ ಇರುತ್ತದೆ. ನನ್ನ ತಾಯಿ ಜೀವಂತ ಇರುವುದಿಲ್ಲ. ನನ್ನ ತಾಯಿ ಜೀವಂತ ಇದ್ದಾಗ ದಾವಾ ಆಸ್ತಿಯಲ್ಲಿ ಸುಮಾರು 31 ಗುಂಟೆ ಬೇರೆ ಬೇರೆ ವ್ಯಕ್ತಿಗಳಿಗೆ ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ. ಅದರ ವಿವರಗಳನ್ನು ಸರ್ವೆ ರಿಪೋರ್ಟ್ ನಲ್ಲಿ ತೋರಿಸಿದ್ದಾರೆ ಎಂದರೆ ಸರಿ. ಖರೀದಿ ಮಾಡಿದ ವ್ಯಕ್ತಿಗಳು ಈಗ ಖರೀದಿ ಮಾಡಿದ ಸ್ವತ್ತಿನಲ್ಲಿ ಸ್ವಾಧೀನ ಇದ್ದಾರೆ ಎಂದರೆ ಸರಿ. ಖರೀದಿದಾರರನ್ನು ಮೂಲ ದಾವೆಯಲ್ಲಿ ಮತ್ತು ಈ ವ್ಯಾಜ್ಯದಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಖರೀದಿದಾರರೊಂದಿಗೆ ಶಾಮಿಲಾಗಿ ಸಂಪೂರ್ಣ ಅಡಿಕೆ ತೋಟ ನನ್ನ ಹಿಸ್ಸೆಗೆ ಬರುವಂತೆ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಮನೆಗಳು ಇರುವ ಸ್ಥಳಗಳನ್ನು ತಕರಾರುದಾರರ ಹಿಸ್ಸೆಗೆ ಬರುವಂತೆ ನೋಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಅನುಭವದಾರರು ಎದುರುದಾರರಿಗೆ ಸ್ವಾಧೀನ ಬಿಟ್ಟು ಕೊಡಲು ತಯಾರು ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ತಂಟೆ ಇರುವ ಸ್ಥಳವನ್ನು ಎದುರುದಾರರ ಹಿಸ್ಸೆಗೆ ಬಿಟ್ಟು ಫಲವತ್ತಾದ ಅಡಿಕೆ ತೋಟ ನನ್ನ ಹಿಸ್ಸೆಗೆ ಬರುವಂತೆ ನೋಡಿಕೊಂಡಿದ್ದೇನೆ . ಆದ್ದರಿಂದ ಕಮೀಷನರ್ ವರದಿ ಸರಿಯಾಗಿ ಇರುವುದಿಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u>** ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಒ**

**Sd/-**

***ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ***
***ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.***